ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 11-03-1971.

*<u>ಪರಿಸ್ಥಿತಿಗಳನ್ನು ಪಾರು ಮಾಡುವ ಸಾಧನ ಸ್ವಸ್ಥಿತಿ</u>* (परिस्थितियों को पार करने का साधन - 'स्वस्थिति')

ವ್ಯಕ್ತದಲ್ಲಿರುತ್ತಾ ಅವ್ಯಕ್ತ ಸ್ಥಿತಿಯಲ್ಲಿರುವ ಅಭ್ಯಾಸ ಈಗ ಸಹಜವಾಗಿದೆಯೇ? ಯಾವಾಗ, ಎಲ್ಲಿ ತಮ್ಮ ಬುದ್ಧಿಯನ್ನು ಜೋಡಿಸಬೇಕೋ ಅಲ್ಲಿ ಜೋಡಿಸುವ ಈ ಅಭ್ಯಾಸವನ್ನು ಹೆಚ್ಚಿಸಿಕೊಳ್ಳಲು ತಮ್ಮ ಮನೆಗೆ ಅಥವಾ ಭಟ್ಟಿಯಲ್ಲಿ ಬಂದಿರುವಿರಿ. ಇಲ್ಲಿಯ ಸ್ವಲ್ಪ ಸಮಯದ ಅನುಭವ ಸದಾಕಾಲವಿರುವ ಪ್ರಯತ್ನ ಮಾಡಬೇಕು. ಇಲ್ಲಿ ಭಟ್ಟಿಯ ಅಥವಾ ಮಧುಬನದಲ್ಲಿ ಓಡಾಡುತ್ತಾ ಹೇಗೆ ತಮ್ಮನ್ನು ಅವ್ಯಕ್ತ ಫರಿಶ್ತಾ ಎಂದು ತಿಳಿಯುತ್ತೀರೋ ಹಾಗೆ ಕರ್ಮಕ್ಷೇತ್ರ ಅಥವಾ ಸೇವಾ ಭೂಮಿಯಲ್ಲಿ ಈ ಅಭ್ಯಾಸವನ್ನು ತಮ್ಮ ಜೊತೆಗಿಟ್ಟುಕೊಳ್ಳಿ. ಒಂದು ಸಾರಿ ಮಾಡಿದ ಅನುಭವ ಎಲ್ಲಿಯಾದರೂ ನೆನಪು ಮಾಡಿಕೊಳ್ಳಬಹುದು. ಇಲ್ಲಿಯ ಅನುಭವ ಅಲ್ಲಿಯೂನೆನಪಿಟ್ಟುಕೊಳ್ಳುವುದರಿಂದ, ಇಲ್ಲಿಯ ಸ್ಥಿತಿಯಲ್ಲಿ ಅಲ್ಲಿಯೂ ಸ್ಥಿತರಾಗುವುದರಿಂದ ಬುದ್ಧಿಗೆ ಅಭ್ಯಾಸವಾಗುವುದು. ಲೌಕಿಕ ಜೀವನದಲ್ಲಿ ಬಯಸದಿದ್ದರೂ ಅಭ್ಯಾಸಗಳು ತಮ್ಮೆಡೆಗೆ ಸೆಳೆಯುತ್ತವೆ. ಅದೇ ರೀತಿ ಅವ್ಯಕ್ತಸ್ಥಿತಿಯಲ್ಲಿ ಸ್ಥಿತರಾಗುವ ಅಭ್ಯಾಸವಾದ ಮೇಲೆ ಈ ಅಭ್ಯಾಸ ಇಚ್ಛೆಯಿಲ್ಲದಿದ್ದರೂ ಸ್ವತಃ ತನ್ನೆಡೆಗೆ ಸೆಳೆಯುವುದು. ಇಷ್ಟು ಪುರುಷಾರ್ಥ ಮಾಡುತ್ತಿದ್ದರೂ, ಈಗಲೂ ಇನ್ನೂ ಕೆಲವರು ಇದು ನನ್ನ ಅಭ್ಯಾಸವಾಗಿದೆ ಎಂದು ಹೇಳುವಂತಹ ಆತ್ಮರಿದ್ದಾರೆ. ದುರ್ಬಲತೆ ಏಕಿದೆ. ಕ್ರೋಧ ಏಕೆ ಮಾಡಿದಿರಿ, ಕೋಮಲ ಏಕೆ ಆದಿರಿ ಎಂದು ಕೇಳಿದರೆ ಇದು ನನ್ನ ಅಭ್ಯಾಸವಾಗಿದೆ ಎಂದು ಹೇಳುವರು. ಈ ರೀತಿ ಉತ್ತರವನ್ನು ಈಗಲೂ ಕೊಡುತ್ತಾರೆ. ಇದೇ ರೀತಿ ಈ ಸ್ಥಿತಿಯ ಅಥವಾ ಅವಸ್ಥೆಯ ಅಭ್ಯಾಸವಾದರೆ, ಆಗ ಬಯಸದಿದ್ದರೂ ಈ ಅವ್ಯಕ್ತಸ್ಥಿತಿಯ ಅಭ್ಯಾಸ ತನ್ನೆಡೆಗೆ ಆಕರ್ಷಿಸುವುದು. ಈ ಅಭ್ಯಾಸ ತಮ್ಮನ್ನು ನ್ಯಾಯಾಲಯಕ್ಕೆ ಹೋಗುವುದಂತೆ ತಪ್ಪಿಸುವುದು ತಿಳಿಯಿತೇ? ದುರಭ್ಯಾಸಗಳನ್ನು ತಮ್ಮದಾಗಿಸಿಕೊಳ್ಳುವಾಗ ಒಳ್ಳೆಯ ಅಭ್ಯಾಸಗಳನ್ನು ಮಾಡಲಾರಿರಾ? 2-4 ಬಾರಿ ಯಾವುದೇ ಮಾತನ್ನು ಪ್ರ್ಯಾಕ್ಟಿಕಲ್ ನಲ್ಲಿ ತಂದಾಗ ಅಭ್ಯಾಸವಾಗುತ್ತದೆ. ಇಲ್ಲಿಯ ಈ ಭಟ್ಟಿಯಲ್ಲಿ ಅಥವಾ ಮಧುಬನದಲ್ಲಿ ಈ ಅಭ್ಯಾಸವನ್ನು ಪ್ರಾಕ್ಟಿಕಲ್ ನಲ್ಲಿ ತರುತ್ತೀರಲ್ಲವೇ? ಇಲ್ಲಿ ತರುವಾಗ ಇನ್ನೂ ಅಭ್ಯಾಸವಾಗುತ್ತದೆ. ಅಭ್ಯಾಸ ಮಾಡಿದ ಮಾತು ಏನಾಗುವುದು? ಸಹಜ ಮತ್ತು ಸ್ವಭಾವವಾಗುವುದು. ತಿಳಿಯಿತೇ? ಇದು ನನ್ನ ಸ್ವಭಾವ ಎಂದು ಹೇಳುತ್ತೀರಲ್ಲವೇ? ಹಾಗಾದರೆ ಈ ಅಭ್ಯಾಸವೂ ಅಭ್ಯಾಸಬಲದಿಂದ ಸಹಜ ಮತ್ತು ಸ್ವಭಾವವಾಗಬೇಕು. ಈ ಸ್ಥಿತಿ ಸ್ವಭಾವವಾದಾಗ ಏನಾಗುವುದು? ಪ್ರಾಕೃತಿಕ ವಿಕೋಪಗಳಾಗುವವು. ತಮ್ಮ ಸ್ವಭಾವವಾಗದಿರುವಕಾರಣ ಈ ಪ್ರಾಕೃತಿಕ ವಿಕೋಪಗಳು ತಡೆದಿವೆ. ಎದುರಿಸುವವರು ತಮ್ಮ ಸ್ವ-ಸ್ಥಿತಿಯಿಂದ ಈ ಪರಿಸ್ಥಿತಿಗಳನ್ನು ಪಾರು ಮಾಡಲಾರರು ಎಂದಾಗ ಈ ಪರಿಸ್ಥಿತಿಗಳು ಹೇಗೆ ಬರುತ್ತವೆ? ಎದುರಿಸುವವರು ಇನ್ನೂ ತಯಾರಾಗಿಲ್ಲ, ಆದ್ದರಿಂದ ಈ ಪರದೆ ಸರಿಯಲು ತಡವಾಗುತ್ತಿದೆ. ಇಲ್ಲಿಯವರೆಗೆ ಈ ಹಳೆಯ ಅಭ್ಯಾಸಗಳಿಂದ, ಹಳೆಯ ಸಂಸ್ಕಾರಗಳಿಂದ, ಹಳೆಯ ಮಾತುಗಳಿಂದ, ಹಳೆಯ ಜಗತ್ತಿನಿಂದ ಹಳೆಯ ದೇಹದ ಸಂಬಂಧಗಳಿಂದ ವೈರಾಗ್ಯ ಬಂದಿಲ್ಲವೇ?. ಎಲ್ಲಿಯೇ ಹೋಗಬೇಕಾದರೂ ಯಾವ ವಸ್ತುಗಳನ್ನು ಬಿಡಬೇಕಾಗಿದೆಯೋ ಅವುಗಳಿಗೆ ಬೆನ್ನುತೋರಿಸಬೇಕು. ಇನ್ನೂವರೆಗೂ ಇದು ಬಂದಿಲ್ಲ. ಒಂದು ಬೆನ್ನು ತೋರಿಸುವುದಿಲ್ಲ, ಇನ್ನೊಂದು ಯಾವ ಸಾಧನ ಸಿಗುತ್ತದೆಯೋ ಅದಕ್ಕೆ ಬೆನ್ನು ತೋರಿಸುವುದಿಲ್ಲ. ಸೀತೆ ಮತ್ತು ರಾವಣನ ಆಟಿಗೆಯಲ್ಲಿ ನೋಡಿರುವಿರಲ್ಲವೇ? ರಾವಣನ ಕಡೆಗೆ ಸೀತೆ ಏನು ಮಾಡುತ್ತಾಳೆ? ಬೆನ್ನು ತೋರಿಸುತ್ತಾಳೆ. ಬೆನ್ನು ತೋರಿಸಿದರೆ ಸಹಜವಾಗಿ ಅದರ ಆಕರ್ಷಣೆಯಿಂದ ಬಚಾವಾಗುವಿರಿ. ಆದರೆ ಬೆನ್ನು ತೋರಿಸುತ್ತಿಲ್ಲ. ಸ್ಮಶಾನಕ್ಕೆ ಸಮೀಪ ಬಂದಾಗ ಕಾಲುಗಳನ್ನು ಈ ಕಡೆಗೆ ಮುಖವನ್ನು ಆ ಕಡೆಗೆ ಮಾಡುತ್ತಾರೆ. ಈ ರೀತಿ ಮಾಡುವುದು ಬರುತ್ತಿಲ್ಲ. ಮುಖವನ್ನು ಆ ಕಡೆಗೆ ತಿರುಗಿಸುತ್ತೀರಿ ಆದ್ದರಿಂದ ಆಕರ್ಷಣೆಯಲ್ಲಿ ಸಿಕ್ಕಿಕೊಳ್ಳುತ್ತೀರಿ. ಎರಡೂ ಪ್ರಕಾರದ ಬೆನ್ನು ತೋರಿಸಲು ಬರುವುದಿಲ್ಲ. ಮಾಯೆ ಬಹಳ ಆಕರ್ಷಣೆ ಮಾಡುವ ರೂಪ ರಚಿಸುತ್ತದೆ. ಆದ್ದರಿಂದ ಬಯಸದಿದ್ದರೂ, ಬೆನ್ನು ತೋರಿಸುವ ಬದಲು ಆಕರ್ಷಣೆಯಲ್ಲಿ ಬರುತ್ತೀರಿ. ಅದೇ ಆಕರ್ಷಣೆಯಲ್ಲಿ ಪುರುಷಾರ್ಥವನ್ನು ಮರೆತು,

ಮುಂದುವರೆಯುವುದನ್ನು ಮರೆತು ನಿಂತು ಬಿಡುತ್ತೀರಿ. ಆಗ ಏನಾಗುತ್ತದೆ? ಗುರಿ ಸೇರಲು ತಡವಾಗುವುದು. ಕುಮಾರರ ಭಟ್ಟಿಯಲ್ಲವೇ? ಹಾಗಾದರೆ ಕುಮಾರರು ಈ ಆಟಿಗೆ ಎದುರಿಗೆ ಇಟ್ಟುಕೊಳ್ಳಬೇಕು. ಮಾಯೆಯ ಕಡೆಗೆ ಮುಖ ಮಾಡುತ್ತೀರಿ, ಆಗ ಮಾಯೆಯ ಕಡೆಯಿಂದ ಬರುವ ಪರೀಕ್ಷೆಗಳನ್ನು ಎದುರಿಸಲಾರಿರಿ. ಆ ಕಡೆಗೆ ಮುಖ ಮಾಡದಿದ್ದರೆ ಪರಿಸ್ಥಿತಿಗಳನ್ನು ಎದುರಿಸಬಲ್ಲಿರಿ ತಿಳಿಯಿತೇ

ಸದಾ ಪವಿತ್ರ ಮತ್ತು ಸತೋಗುಣಿಯಾಗಿರುವ ಕುಮಾರರ ಸ್ಮೃತಿಚಿಹ್ನೆ ಯಾವುದು

ಗೊತ್ತಿದೆಯೇ ? ಸನಂತಕುಮಾರ, ಅವರ ಯಾವ ವಿಶೇಷತೆಯನ್ನು ತೋರಿಸುತ್ತಾರೆ. ಎಂದು ಅವರನ್ನು ಯಾವಾಗಲೂ ಚಿಕ್ಕಕುಮಾರರ ರೂಪದಲ್ಲಿ ತೋರಿಸುತ್ತಾರೆ. ಆದರ ಆಯುಷ್ಯ ಯಾವಾಗಲೂ ಐದು ವರ್ಷವೆಂದು ಹೇಳುತ್ತಾರೆ. ಇದು ಪವಿತ್ರತೆಯ ಗಾಯನವಾಗಿದೆ. 5 ವರ್ಷದ ಬಾಲಕ ಯಾವಾಗಲೂ ಪವಿತ್ರನಾಗಿರುತ್ತಾನಲ್ಲವೇ ಸಂಬಂಧಗಳ ಆಕರ್ಷಣೆಯಿಂದ ದೂರವಿರುತ್ತಾನೆ. ಎಷ್ಟೇ ಲೌಕಿಕ ಪರಿವಾರವಿದ್ದರೂ ಚಿಕ್ಕ ಮಗುವು ಪವಿತ್ರವಾಗಿರುವಂತೆ ಸ್ಥಿತಿಯಿರಲಿ. ಅದೇ ತರಹದ ಪವಿತ್ರತೆಯ ಸ್ಮೃತಿಚಿಹ್ನೆ ಆಗಿದೆ. ಕುಮಾರ ಎಂದರೆ ಪವಿತ್ರ ಅವಸ್ಥೆ, ಅದರಲ್ಲಿಯೂ ಕೇವಲ ಒಬ್ಬರಲ್ಲ, ಸಂಘಟನೆಯನ್ನು ತೋರಿಸಲಾಗಿದೆ. ದೃಷ್ಟಾಂತದಲ್ಲಿ ಕೆಲವರನ್ನು ತೋರಿಸಲಾಗುತ್ತದೆ. ಅಪವಿತ್ರತೆಯ ಸಂಕಲ್ಪ ಅಥವಾ ಅನುಭವ ಇರದಷ್ಟು ಪವಿತ್ರತೆಯಿರುತ್ತದೆ.

ಇಂತಹ ಸ್ಥಿತಿಯನ್ನು ಸ್ಮೃತಿಚಿಹ್ನೆ ಸಮಾನ ಮಾಡಿಕೊಂಡು ಹೋಗಬೇಕು. ಭಟ್ಟಿಯಲ್ಲಿ ಇದಕ್ಕಾಗಿಯೇ ಬಂದಿರುವಿರಲ್ಲವೇ? ಈ ಜಗತ್ತಿನ ಮಾತುಗಳಿಂದ, ಸಂಬಂಧಗಳಿಂದ ಅತೀತರಾದಾಗ ದೈವಿ ಪರಿವಾರದ, ಬಾಪ್ ದಾದಾರ ಮತ್ತು ಇಡೀ ಜಗತ್ತಿನ ಪ್ರಿಯ(ಪ್ಯಾರಾ)ರಾಗುವಿರಿ, ಹಾಗೆಯೂ ಯಾರಾದರೂ ಸಂಬಂಧಿಕರಿಂದ ಅತೀತರಾದಾಗ, ಲೌಕಿಕ ರೀತಿಯಿಂದ ಬೇರೆಯಾದಾಗ ಹೆಚ್ಚು ಪ್ರಿಯರಾಗುತ್ತಾರೆ. ಅವರ ಜೊತೆಗೆ ಇದ್ದಾಗ ಅಥವಾ ಅವರ

ಸಂಬಂಧದ ಎಳೆತದಲ್ಲಿರುವಾಗ ಅಷ್ಟು ಪ್ರಿಯರಾಗುವುದಿಲ್ಲ. ಅದಾಯ್ತು ಲೌಕಿಕ, ಆದರೆ ಇಲ್ಲಿ ಜ್ಞಾನ ಸಹಿತ ಆತೀತರಾಗಬೇಕು. ಕೇವಲ ಹೊರಗಿನಿಂದ ಅತೀತರಾಗುವುದಲ್ಲ. ಮನದ ಎಳೆತವಿರಬಾರದು. ಎಷ್ಟೆಷ್ಟು ಅತೀತರಾಗುವಿರೋ ಅಷ್ಟಷ್ಟು ಅವಶ್ಯವಾಗಿ ಪ್ರಿಯರಾಗುವಿರಿ. ತಮ್ಮ ದೇಹದಿಂದಲೂ ಅತೀತರಾದರೆ ಆ ಅತೀತ ಅವಸ್ಥೆ ತಮಗೂ ಸಹ ಪ್ರಿಯವೆನಿಸುತ್ತದೆ. ಈ ರೀತಿಯ

ಅನುಭವವನ್ನು ಎಂದಾದರೂ ಮಾಡಿರುವಿರಾ? ತಮ್ಮ ಅತೀತ ಅವಸ್ಥೆ ತಮಗೆ ಪ್ರಿಯವಾದಾಗ, ಎಳೆತದಿಂದ ಅತೀತ ಅವಸ್ಥೆ ಪ್ರಿಯವೆನಿಸುವುದಿಲ್ಲವೇ? ದೇಹದಲ್ಲಿ ಎಳೆತವಿರುವ ದಿನ ಅತೀತತೆಯಿರುವುದಿಲ್ಲ ಆಗ ತಮಗೆ ತಾವೂ ಪ್ರಿಯರಾಗುವುದಿಲ್ಲ. ಚಿಂತಾಕ್ರಾಂತರಾಗಿರುತ್ತೀರಿ. ಅದೇ ರೀತಿ ಹೊರಗಿನ ಎಳೆತದಿಂದ ಅತೀತರಾಗದಿದ್ದರೆ ಪ್ರಿಯರಾಗುವ ಬದಲು ಚಿಂತಾಕ್ರಾಂತರಾಗುತ್ತೀರಿ. ಈ ಅನುಭವ ಎಲ್ಲರಿಗೂ ಇರಬೇಕಲ್ಲವೇ ? ಕೇವಲ ಇಂತಹ ಅನುಭವವನ್ನು ಸದಾಕಾಲ ಮಾಡಬಾರದು. ಈ ಅತೀತ ಮತ್ತು ಅತಿಪ್ರಿಯ ಅನುಭವ ಮಾಡದೇ ಇರುವಂತಹವರು ಯಾರಾದರೂ ಇರುವಿರಾ? ತಮ್ಮನ್ನು ಯೋಗಿ ಎಂದು ಹೇಳಿಕೊಳ್ಳುತ್ತೀರಾ? ತಮ್ಮನ್ನು ಸಹಜ ರಾಜಯೋಗಿ ಎಂದು ಹೇಳಿಕೊಳ್ಳುವಾಗ ಈ ರೀತಿಯ ಅನುಭವ ಮಾಡದಿರಲು

ಸಾಧ್ಯವೇ ಇಲ್ಲ. ಇಲ್ಲವಾದರೆ ಈ ಟೈಟಲ್ ತಮಗೆ ಕೊಡಬಾರದು. ಯೋಗಿ ಎಂದರೆ ಈ ಯೋಗ್ಯತೆಯಿದೆ, ಆಗಲೇ ಯೋಗಿ ಇಲ್ಲವಾದರೆ ತಮ್ಮ ಪರಿಚಯದಲ್ಲಿ ನಾವು ಸಹಜ ರಾಜಯೋಗದ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಎಂಬ ಶಬ್ದವನ್ನು ಹೇಳಬಾರದು. ವಿದ್ಯಾರ್ಥಿಗಳಲ್ಲವೇ? ವಿದ್ಯಾರ್ಥಿಗೆ ಅಧ್ಯಯನದ ಅನುಭವವಿಲ್ಲವೆಂದರೆ ಅದು ಸಾಧ್ಯವಿಲ್ಲ. ಈ ಅನುಭವವನ್ನು ಎಲ್ಲಿಯವರೆಗೆ ಸದಾಕಾಲವಿಟ್ಟುಕೊಳ್ಳುವಿರಿ ಅಥವಾ ಅಲ್ಪಕಾಲದ ಅನುಭವ ಮಾಡುವಿರಿ ಇದು ಅವಶ್ಯಕ. ಈ ಅಂತರವಿರಲು ಸಾಧ್ಯ. ಹಳೆಯ ವಿದ್ಯಾರ್ಥಿಗಳ ಅನುಭವ ಅಲ್ಪಕಾಲದ್ದಾಗಿರಬಾರದು. ಇನ್ನೂವರೆಗೂ ಅಲ್ಪಕಾಲದ ಅನುಭವವಿದ್ದರೆ ಏನಾಗುವುದು? ಸಂಗಮಯುಗದ ಆಸ್ತಿ ಮತ್ತು ಭವಿಷ್ಯದ ಆಸ್ತಿ ಎರಡೂ ಅಲ್ಪ ಸಮಯಕ್ಕಾಗಿ ಪ್ರಾಪ್ತಿಯಾಗುವವು. ತಿಳಿಯಿತೇ? ಪೂರ್ಣ ಸಮಯದ ಆಸ್ತಿಯನ್ನು ಪಡೆಯಲಾರಿರಿ. ಅಲ್ಪ ಸಮಯ ಪಡೆಯುವಿರಿ. ಹಾಗಾದರೆ ಇದರಲ್ಲಿಯೇ ಸಂತುಷ್ಟರಾಗಿರುವಿರಾ?

ಇಂದು ಕುಮಾರರ ಭಟ್ಟಿಯ ಆರಂಭವಾಗಿದೆಯಲ್ಲವೇ? ಭಟ್ಟಿಯ ಆರಂಭ ಎಂದರೆ ಪಕ್ವವಾಗುವುದರ ಆರಂಭ ಕೆಲವರು ಸ್ವಾಹಾ ಆಗುವರು, ಕೆಲವರು ಭಟ್ಟಿಯಲ್ಲಿ ಪಕ್ವವಾಗುವರು, ಕೆಲವರು ಪವಿತ್ರತೆಯ ಸಂಕಲ್ಪವನ್ನು ಧೃಡಮಾಡುವರು. ಇಲ್ಲಿ ಹೀಗೆಯೇ ಮಾಡಲು ಬಂದಿರುವಿರಲ್ಲವೇ? ಏನು ಹೇಳಿದಿರೋ ಅದನ್ನು ಮಾಡಿದ್ದೀರಾ ಎಂಬುದನ್ನು ನೋಡಬೇಕು? ಈ ಗುಂಪು ಪೂರ್ಣ ಮಾಯೆಯಿಂದ ಮುಗ್ಧಮತ್ತು ಜ್ಞಾನದಿಂದ ಸಂನ್ಯಾಸಿಯಾಗಿ ಹೋಗಬೇಕು. ಸತ್ಯಯುಗದ ಆತ್ಮರು ಇಲ್ಲಿಗೆ ಬಂದಾಗ ವಿಕಾರಗಳಿಂದ ಮುಗ್ಧರಾಗಿರುತ್ತಾರೆ. ನೋಡಿರುವಿರಲ್ಲವೇ? ನಾವು ಸತ್ಯಯುಗದಲ್ಲಿದ್ದಾಗ ಹೇಗಿದ್ದೆವು ಎಂದು ನೆನಪಾಗುತ್ತದೆಯಲ್ಲವೇ? ಮಾಯೆಯ ಜ್ಞಾನದಿಂದ ಮುಗ್ಧರಾಗಿದ್ದೆವು - ನೆನಪಿಗೆ ಬರುತ್ತದೆಯೇ? ತಮ್ಮ ಆ ಸಂಸ್ಕಾರಗಳು
ಸ್ಮರಣೆಗೆ ಬರುತ್ತವೆಯೇ ಅಥವಾ ಕೇಳಿರುವ ಕಾರಣ ತಿಳಿದುಕೊಳ್ಳುತ್ತೀರಾ? ತಮ್ಮ ಈ ಜನ್ಮದಲ್ಲಿಯ ಬಾಲ್ಯದ ಮಾತುಗಳು ಹೇಗೆ ಸ್ಪಷ್ಟವಾಗಿ ಸ್ಮೃತಿಯಲ್ಲಿ ಬರುತ್ತವೆಯೋ, ಹಾಗೆಯೇ ನಿನ್ನೆಯ ತಮ್ಮ ಆ ಸಂಸ್ಕಾರಗಳು ಇಂದಿನ ಜೀವನದಲ್ಲಿಯ ಸಂಸ್ಕಾರಗಳ ಸಮಾನ ಸ್ಪಷ್ಟ ಸ್ಮೃತಿಯಲ್ಲಿ ಬರುತ್ತವೆಯೇ ಅಥವಾ ಸ್ಮೃತಿಯಲ್ಲಿ ತರಬೇಕಾಗುತ್ತದೆಯೇ ? ಅಂತಹವರು ಕೈ ಎತ್ತಿ. ಇದು ಸ್ಪಷ್ಟ ಸ್ಮೃತಿಯಲ್ಲಿ ಬರಬೇಕು. ಸಾಕಾರ ರೂಪದಲ್ಲಿ (ಬ್ರಹ್ಮಾ ತಂದೆಯಲ್ಲಿ) ಸ್ಪಷ್ಟವಾಗಿ ಸ್ಮೃತಿಯಲ್ಲಿ ಇದ್ದವಲ್ಲವೇ ? ತಮ್ಮಆತ್ಮಿಕ-ಸ್ವರೂಪದ ಸ್ಮೃತಿ ಸ್ಪಷ್ಟ ಮತ್ತು ಸದಾಕಾಲವಿದ್ದಾಗ ಈ ಸ್ಮೃತಿ ಸ್ಪಷ್ಟ ಮತ್ತು ಸದಾಕಾಲವಿರುವುದು. ಈಗ ಆತ್ಮಿಕ ಸ್ಥಿತಿಯ ಸ್ಮೃತಿ ಒಮ್ಮೊಮ್ಮೆ ದೇಹದ ಪರದೆಯ ಒಳಗೆ ಮುಚ್ಚಲ್ಪಡುತ್ತದೆ. ಆದ್ದರಿಂದ ಈ ಸ್ಮೃತಿಯೂ ಪರದೆಯ ಒಳಗೆ ಕಂಡುಬರುತ್ತದೆ, ಸ್ಪಷ್ಟವಾಗಿ ಕಂಡು ಬರುವುದಿಲ್ಲ. ಆತ್ಮಿಕ-ಸ್ಮೃತಿ ಸ್ಪಷ್ಟ ಮತ್ತು ಬಹಳ ಸಮಯ ಇರುವುದರಿಂದ ತಮ್ಮ ಭವಿಷ್ಯದ ಆಸ್ತಿ ಅಥವಾ ತಮ್ಮ ಭವಿಷ್ಯದ ಸಂಸ್ಕಾರ ಸ್ವರೂಪದಲ್ಲಿ ಎದುರಿಗೆ ಬರುವವು. ತಾವು ಚಿತ್ರದಲ್ಲಿ ಏನು ತೋರಿಸಿರುವಿರಿ? ಒಂದು ಕಡೆಗೆ ವಿಕಾರಗಳು ಓಡಿ ಹೋಗುತ್ತವೆ, ಇನ್ನೊಂದು ಕಡೆಗೆ ಬುದ್ಧಿಯ ಸ್ಮೃತಿ ತಂದೆ ಮತ್ತು ಭವಿಷ್ಯದ ಪ್ರಾಪ್ತಿಯ ಕಡೆಗೆ. ಈ ಲಕ್ಷ್ಮೀನಾರಾಯಣರ ಚಿತ್ರವನ್ನು ತೋರಿಸಲಾಗಿದೆ. ಈ ಚಿತ್ರವನ್ನು ಯಾರಿಗಾಗಿ ಮಾಡಲಾಗಿದೆ? ಬೇರೆಯವರಿಗಾಗಿಯೋ ಅಥವಾ ತಮ್ಮ ಸ್ಥಿತಿಗಾಗಿಯೋ? ಹಾಗಾದರೆ ಭವಿಷ್ಯ ಸಂಸ್ಕಾರಗಳನ್ನು ಸ್ಪಷ್ಟ ಸ್ಮೃತಿಯಲ್ಲಿ ತರಲು ಆತ್ಮಿಕ-ಸ್ವರೂಪದ ಸ್ಮೃತಿ ಸದಾಕಾಲ ಮತ್ತು ಸ್ಪಷ್ಟವಾಗಿರಲಿ. ಈ ದೇಹ ಸ್ಪಷ್ಟವಾಗಿ ಕಾಣುವಂತೆ ಆತ್ಮನ ಸ್ವರೂಪ ಸ್ಪಷ್ಟ ಕಂಡುಬರಬೇಕು ಎಂದರೆ ಅನುಭವಕ್ಕೆ ಬರಬೇಕು ಹಾಗಾದರೆ ಕುಮಾರರು ಈಗ ಏನು ಮಾಡಬೇಕು? ಮುಗ್ಧರೂ ಆಗಬೇಕು,ಸಂನ್ಯಾಸಿಗಳೂ ಆಗಬೇಕು. ಸಹಜ ಅಧ್ಯಯನವಾಗಿದೆಯಲ್ಲವೇ? ಎರಡು ಶಬ್ದಗಳಲ್ಲಿ ತಮ್ಮ ಪೂರ್ಣ ಕೋರ್ಸ್ ಆಗುವುದು, ಈಮುದ್ರೆಯನ್ನು ಹಾಕಿಸಿಕೊಂಡು ಹೋಗಬೇಕು. ದುರ್ಬಲತೆ, ಚಿಂತೆ ಮುಂತಾದ ಮಾತುಗಳಲ್ಲಿ ಮುಗ್ಧರು, ದುರ್ಬಲತೆ ಶಬ್ದಸಮಾಪ್ತಿಯಾಗಬೇಕು. ಈ ಗುಂಪಿನ ಹೆಸರೇನಾಗಿದೆ? ಸರಳತೆ ಮತ್ತು ಪವಿತ್ರತೆಯಲ್ಲಿರುವಂತಹ ಗುಂಪು, ಸರಳವಾಗಿರುವಂತಹದು ಸುಂದರವಾಗಿರುತ್ತದೆ. ವಸ್ತ್ರಗಳ ಸರಳತೆ ಮಾತ್ರವಲ್ಲ ಆದರೆ ಎಲ್ಲಾ ಮಾತುಗಳಲ್ಲಿ, ನಿರಹಂಕಾರಿಯಾಗಿ ಇರುವುದೂ ಸರಳತೆಯಾಗಿದೆ. ಕ್ರೋಧವಿಲ್ಲದಿರುವುದು ಎಂದರೆ ಸರಳ, ನಿರ್ಲೋಭಿಯಾದರೆ ಸರಳ, ಈ ಸರಳತೆ ಪವಿತ್ರತೆಯ ಸಾಧನವಾಗಿದೆ. ಒಳ್ಳೆಯದು. ಯಾವ ಸ್ಲೋಗನ್ ನೆನಪಿಡುವಿರಿ? ಕುಮಾರರು ಏನನ್ನಾದರೂ ಮಾಡಲು ಹೇಳಿದಾಗ ಅದನ್ನು ಮಾಡಬಲ್ಲರು. ಏನೇಮಾತನ್ನು ಹೇಳಿದರೂ " **ಮೊದಲು ಮಾಡಿ ತೋರಿಸುತ್ತೇವೆ, ನಂತರ ಹೇಳುತ್ತೇವೆ"** ಮೊದಲು ಹೇಳುವುದಿಲ್ಲ. ಈ ಸ್ಲೋಗನ್ ನೆನಪಿಡಿ.

ಅವ್ಯಕ್ತ ಮುರಳಿ 11-03-1971.

***ಪರಿಸ್ಥಿತಿಗಳನ್ನು ಪಾರು ಮಾಡುವ ಸಾಧನ - ಸ್ವಸ್ಥಿತಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಿ ಧಾರಣೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಹಜವಾಗಿ ವ್ಯಕ್ತದಲ್ಲಿರುತ್ತಾ ಅವ್ಯಕ್ತ ಸ್ಥಿತಿಯಲ್ಲಿರುವ ಅಭ್ಯಾಸವನ್ನು ಮಾಡಿದ್ದೇನೆ.

2. ನಾನು ಕರ್ಮಕ್ಷೇತ್ರ ಅಥವಾ ಸೇವಾ ಭೂಮಿಯಲ್ಲಿಯೂ ಅವ್ಯಕ್ತ ಸ್ಥಿತಿಯಲ್ಲಿರುವ ಅಭ್ಯಾಸವನ್ನು ಮಾಡಿದ್ದೇನೆ.

3. ಅವ್ಯಕ್ತ ಸ್ಥಿತಿಯಲ್ಲಿರುವ ಅಭ್ಯಾಸ ನನ್ನನ್ನು ನ್ಯಾಯಸ್ಥಾನದಿಂದ ದೂರವಿರುವಂತೆ ರಕ್ಷಿಸುತ್ತದೆ.

4. ನನಗೆ ನನ್ನ ಹಳೆಯ ಅಭ್ಯಾಸಗಳು, ಹಳೆಯ ಸಂಸ್ಕಾರಗಳು, ಹಳೆಯ ವಿಷಯಗಳು, ಹಳೆಯ ಜಗತ್ತಿನ, ಹಳೆಯ ದೇಹ ಸಂಬಂಧಗಳೊಂದಿಗೆ ವೈರಾಗ್ಯವಿದೆ.

5. ಅವ್ಯಕ್ತಸ್ಥಿತಿ ನನ್ನ ಸ್ವಭಾವವಾಗಿದೆ, ಪ್ರಕೃತಿಯ ವಿಕೋಪಗಳನ್ನು ಎದುರಿಸಲು ನನ್ನ ಸ್ವಸ್ಥಿತಿ ತಯಾರಾಗಿದೆ.

6. ನಾನು ಮಾಯೆಯ ಕಡೆ ಮುಖ ತಿರುಗಿಸದೆ, ಮಾಯೆಯಿಂದ ಬರುವ ಪರಿಸ್ಥಿತಿಗಳಿಂದ ಸುರಕ್ಷಿತವಾಗಿ ಇದ್ದೇನೆ.

7. ನಾನು ಸದಾ ಪವಿತ್ರವಾಗಿ, ಸತೋಪ್ರಧಾನವಾಗಿ ಇರುವ ಸ್ಮೃತಿ ಚಿಹ್ನೆಯನ್ನು ತಯಾರು ಮಾಡಿಕೊಂಡಿದ್ದೇನೆ.

8. ನಾನು ಈ ಜಗತ್ತಿನ ವಿಷಯಗಳಲ್ಲಿ, ಸಂಬಂಧಗಳೊಂದಿಗೆ, ಪೂರ್ತಿ ಅತೀತವಾಗಿ ದೈವಿ ಪರಿವಾರಕ್ಕೆ ಬಾಪ್ ದಾದಾರವರಿಗೆ ಮತ್ತು ವಿಶ್ವಕ್ಕೆ ಪ್ರಿಯವಾಗಿ ತಯಾರಾಗಿದ್ದೇನೆ.

9. ನಾನು ಜ್ಞಾನ ಸಹಿತವಾಗಿ ಅತೀತವಾಗಿರುವ ಕಾರಣ ನನ್ನ ಮನಸ್ಸಿನ ಯಾವುದೇ ಸೆಳೆತವಿಲ್ಲ.

10. ನಾನು ಸಹಜ ರಾಜಯೋಗಿ.

11. ನಾನು ಮಾಯೆಯಿಂದ ಮುಗ್ಧವಾಗಿ, ಜ್ಞಾನದಲ್ಲಿ ತಿಳುವಳಿಕೆಯುಳ್ಳವನಾಗಿದ್ದೇನೆ.

12. ನನ್ನ ಆತ್ಮೀಯ ಸ್ಮೃತಿ ಸದಾಕಾಲಕ್ಕಾಗಿ ಸ್ಪಷ್ಟ ಇರುವ ಕಾರಣ ನನ್ನ ಭವಿಷ್ಯ ಆಸ್ತಿ ಅಥವಾ ಸಂಸ್ಕಾರಗಳ ಸ್ವರೂಪ ಸ್ಪಷ್ಟವಾಗಿ ಎದುರಿಗೆ ಕಾಣಿಸುತ್ತಿದೆ.

13. ನಾನು ಎಲ್ಲಾ ವಿಷಯಗಳಲ್ಲಿ (ಕಾಮ, ಕ್ರೋಧ, ಲೋಭ, ಮೋಹ, ಅಹಂಕಾರಗಳಲ್ಲಿ) ಸಾಧಾರಣವಾಗಿ ಇದ್ದೇನೆ.

14. "ನಾನು ಮೊದಲು ಮಾಡಿ ತೋರಿಸುತ್ತೇನೆ ನಂತರ ಹೇಳುತ್ತೇನೆ" ಎಂಬ ಸ್ಲೋಗನನ್ನು ನೆನಪಿಟ್ಟುಕೊಂಡಿದ್ದೇನೆ.